5.6.97 ರಂದು ನಗರದ ಏಷ್ಯನ್ ಏಜ್ ಆಂಗ್ಲ ದೈನಿಕ ಪತ್ರಿಕಾಲಯದ ಮೇಲೆ ಧಾಳಿ ಮತ್ತು ಪತ್ರಕರ್ತರ ಮೇಲೆ ಹಲ್ಲೆ ನಡೆದಿದೆ.

1996ನೇ ಸಾಲಿನ ದಸರಾ ಮಹೋತ್ಸವದ ಸಮಯದಲ್ಲಿ ಪತ್ರಿಕಾ ಛಾಯಾಗ್ರಾಹಕರು ಹಾಗೂ ಸ್ಥಳೀಯ ಪತ್ರಿಕೆಯ ಓರ್ವ ವರದಿಗಾರರ ಮೇಲೆ ಹಲ್ಲೆ ನಡೆದಿದೆ.

ಜುಲೈ 1997ರಲ್ಲಿ ಮೈಸೂರು ಸಮೀಪದ ಉದ್ಬೂರಿನಲ್ಲಿ ನಡೆದ ಗಲಭೆ ಹಿನ್ನೆಲೆಯಲ್ಲಿ ಮೈಸೂರಿನ ಸ್ಥಳೀಯ ಪತ್ರಿಕೆಗಳ ಇಬ್ಬರು ವರದಿಗಾರರ ಮೇಲೆ ಹಲ್ಲೆ ನಡೆದಿದೆ ಎಂದು ತಿಳಿದು ಬಂದಿದೆ.

ಈ) ಬಾಳೆಹೊನ್ನೂರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ವಿಚಾರಣೆ ನರಸಿಂಹರಾಜಪುರ ನ್ಯಾಯಾಲಯದಲ್ಲಿ ಮುಂದುವರೆದಿದೆ.

ಹಂತ ಪತ್ರಿಕೆ ವರದಿಗಾರ ಕೊಲೆ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ವಹಿಸಲಾಗಿದ್ದು ತನಿಖೆ ಮುಂದುವರೆದಿದೆ.

ಏಷ್ಯನ್ ಏಜ್ ಪತ್ರಿಕಾಲಯದ ಮೇಲೆ ದಾಳಿ ಮತ್ತು ಪತ್ರಕರ್ತರ ಮೇಲೆ ಹಲ್ಲೆ ಪ್ರಕರಣ ತನಿಖೆಗೆ ಪೊಲೀಸ್ ಉಪಆಯುಕ್ತರ ನೇತೃತ್ವದಲ್ಲಿ ವಿಶೇಷ ತನಿಖಾ ದಳ ರಚಿಸಲಾಗಿದೆ.

1996 ದಸರಾ ಮಹೋತ್ಸವದ ವೇಳೆ ಆ ಹಲ್ಲೆ ಪ್ರಕರಣ ಹಾಗೂ ಜುಲೈ 1997ರಲ್ಲಿ ಉಡ್ಬೂರಿನಲ್ಲಿ ನಡೆದ ಗಲಭೆ ಹಿನ್ನೆಲೆಯಲ್ಲಿ ನಡೆದ ಹಲ್ಲೆ ಪ್ರಕರಣಗಳ ತನಿಖೆ ಗೃಹ ಇಲಾಖೆಯಲ್ಲಿ ಮುಂದುವರೆದಿದೆ.

ಉ) ಪತ್ರ ಕರ್ತರ ಮೇಲಿನ ಹಲ್ಲೆ ಪ್ರಕರಣಗಳ ವಿಚಾರಣೆ ನಡೆಸಲು ಆಡಳಿತ ವರ್ಗ ಮತ್ತು ಪತ್ರಕರ್ತರ ನಡುವೆ ಸಮಸ್ಯೆಗಳನ್ನು ಸುಗಮವಾಗಿ ಬಗೆಹರಿಸಲು ಜಿಲ್ಲಾಮಟ್ಟದ ಸಮಿತಿಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳು

2014 - ಶ್ರೀ ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕಾರ್ಮಿಕ ನ್ಯಾಯಾಲಯಗಳಲ್ಲಿ ಐದು ವರ್ಷಗಳಿಂದ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?*
2. *ಮೊಕದ್ದಮೆಗಳು ಇತ್ಯರ್ಥವಾಗದೇ ಉಳಿದಿರಲು ಕಾರಣಗಳೇನು?*
3. *ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

1) 6108

2. ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ವಿಲೇವಾರಿಮಾಡಲು ಈಗ ಅನುಸರಿಸುತ್ತಿರುವ ಧಾನದಿಂದ ವಿಲೇವಾರಿಯಲ್ಲಿ ತಡವಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಆದರೂ ಸಹ ಲವು ಮುಖ್ಯ ಕಾರಣಗಳು ಈ ಕೆಳಗಿನಂತಿವೆ.

ಅ) ನ್ಯಾಯಾಧೀಶರ ಹುದ್ದೆಗಳು ಖಾಲಿ ಇದೆ.

ಆ) ಕಕ್ಷಿದಾರರು ಸಕಾಲದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗದೇ ಇರುವುದರಿಂದ ಮತ್ತು

ಇ) ವಕೀಲರು ಸಕಾಲದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗದೇ ಇರುವುದರಿಂದ

3. ನ್ಯಾಯಾದೀಶರ ಹುದ್ದೆಗಳನ್ನು ಉಚ್ಚನ್ಯಾಯಾಲಯವು ಭರ್ತಿ ಮಾಡಬೇಕಾಗಿ ವುದರಿಂದ, ಉಚ್ಚ ನ್ಯಾಯಾಲಯವನ್ನು ಸಂಪರ್ಕಿಸಲಾಗಿದೆ.

ಬಾರ್ಡ್ ಸಹಾಯದಿಂದ ಕೈಗೊಳ್ಳಲಿರುವ ಕಾಮಗಾರಿಗಳು

2015 - ಡಾ|| ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೊಳ್ಳಲು ನಿರ್ಧರಿಸಿರುವ ಯೋಜನೆಗಳಾವುವು?

ಆ) ಅದಕ್ಕೆ ಒದಗಿಸಲಾಗಿರುವ ಮೊತ್ತವೆಷ್ಟು ಹಾಗೂ ಖರ್ಚಾಗಿರುವ ಹಣವೆಷ್ಟು (ತಾಲ್ಲೂಕುವಾರು ಯೋಜನವಾರು ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೊಳ್ಳಲಾಗುವುದು.

ಆ) 1996-97ನೇ ಸಾಲಿನಲ್ಲಿ133 ಕೋಟಿ ರೂ. ಗಳ ಅಂದಾಜು ಒಪ್ಪಿತವಾಗಿದೆ. ಇದರಲ್ಲಿ ಸ್ತೆಗಳಿಗೆ 78.38 ಕೋಟಿ ರೂ. ಹಾಗೂ ಸೇತುವೆಗಳಿಗೆ 55.41 ಕೋಟಿ ರೂ. ಒಪ್ಪಿತವಾಗಿದೆ. 997 - 98ರಲ್ಲಿ 7.05 ಕೋಟಿ ರೂ. ಸೇತುವೆಗಳ ಅಂದಾಜು ಈವರೆವಿಗೆ ಒಪ್ಪಿತವಾಗಿದೆ. ಈ ವರೆಗೆ ಇ ವೆಚ್ಚವಾಗಿರುವುದಿಲ್ಲ.

ಕ್ಕನಾಯನಹಳ್ಳಿ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳು

2016 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನ ಹಳ್ಳಿಯ ಜೆ.ಎಂ.ಎಫ್.ಸಿ ಹಾಗೂ ಪ್ರಥಮದರ್ಜೆ ಕಾಲೇಜಿನ ಕಟ್ಟಡದ